# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

## ಸ್ಪೆಷಲ್ ಕೇಸ್ – 40/2020

**ಚಾಸಾ– 03**

**ಫ್ರಾಸಾ–02**

**ದಿನಾಂಕ 18.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಸಾಕ್ಷಿದಾರರ ಹೆಸರು** | : ಸುಬ್ರಮಣ್ಯ |
| **ತಂದೆಯ ಹೆಸರು** | : ನರಸಿಂಹನ್ |
| **ವಯಸ್ಸು** | : 56 ವರ್ಷ |
| **ವೃತ್ತಿ** | : ಕೂಲಿ |
| **ವಾಸ ಸ್ಥಳ** | : ಜಾಗೇರಿ |

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಮಹಜರ್ ಅನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ 8(ಸಿ) ಎಂದು ಗುರುತಿಸಲಾಗಿದೆ. ಈ ಸಹಿಯನ್ನು ನಾನು ನಮ್ಮ ಊರಾದ ಜಾಗೇರಿಯ ಆರ್ ಬಿ ತಾಂಡದಲ್ಲಿ ಮಾಡಿದ್ದೇನೆ. ಪೊಲೀಸರು ಆ ಸಹಿ ಮಾಡಿಸಿಕೊಂಡಿದ್ದಾರೆ. ಪೊಲೀಸರು ಬೀಟ್ ಗೆ ಬಂದಿದ್ದೇವೆ ಅದರಿಂದ ಸಹಿ ಮಾಡಿ ಎಂದು ಹೇಳಿದರು ಅದರಿಂದ ಸಹಿ ಮಾಡಿದ್ದೇನೆ. ನಾನು ಅಲ್ಲಿ ಏನೂ ನೋಡಲಿಲ್ಲ. ಪೊಲೀಸರು ಯಾವುದೇ ವಸ್ತುಗಳನ್ನು ವಶಕ್ಕೆ ತೆಗೆದುಕೊಂಡಿಲ್ಲ. ಈಗ ನನಗೆ ತೋರಿಸಿದ ಸಹಿ ನನ್ನ ಸಹಿ. ಸಾಕ್ಷಿಗೆ ಮುದ್ದೇಮಾಲುಃ– 1 ರ ಮೇಲೆ ಅಂಟಿಸಿರುವ ಚೀಟಿಯ ಮೇಲಿರುವ

ಸಹಿಯನ್ನು ತೋರಿಸಲಾಗಿದೆ. ಅದರಲ್ಲಿ ಏನಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಈ ವೇಳೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೇಳಿದರು. ನಂತರ ಸಾಕ್ಷಿ ಕೊಟ್ಟ ಹೇಳಿಕೆಯನ್ನು ಹಾಗು ಸಹಿ ಮಾಡಿದ ಮಹಜರ್ ಅನ್ನು ಪರಿಶೀಲಿಸಿ, ಸಾಕ್ಷಿಯು ಅದಕ್ಕೆ ಅನುಗುಣವಾಗಿ ಹೇಳದ ಕಾರಣ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟಿ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ದಿಃ 08.12.2017 ರಂದು ಸತ್ತೇಗಾಲ ಜಾಗೇರಿಯ ತಿಳ್ಳೇಗೌಡನ ದೊಡ್ಡಿಜ್ಞ ಗ್ರಾಮದ ಬಳಿ ಇರುವ ಗುರುಸ್ವಾಮಿ ಬಿನ್ ಲೇಟ್ ಚಿನ್ನಪ್ಪಗೌಡನ್ ವ್ಯವಸಾಯ ಮಾಡಿಕೊಂಡಿರುವ ಅರಿಶಿನ, ತೊಗರಿ ಫಸಲನ್ನು ಬೆಳೆದಿರುವ ಜಮೀನಿನಲ್ಲಿ ಅಕ್ರಮವಾಗಿ ಅವರು ಬೆಳೆದಿದ್ದ 55 ಗಾಂಜಾ ಗಿಡವನ್ನು ಪೊಲೀಸರು ನನ್ನ ಸಮಕ್ಷಮ 55 ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಅವುಗಳು 3 ರಿಂದ 5 ಅಡಿಯಷ್ಟು ಎತ್ತರವಿದ್ದು ಮತ್ತು ಅದರ ತೂಕ 106 ಕೆ ಜಿ ಇದ್ದು ಅದರ ಬೆಲೆ ರೂ.2,12,000/– ಇದ್ದು ಪೊಲೀಸರು ನನ್ನ ಸಮಕ್ಷಮ ಎಲ್ಲಾ ಗಾಂಜಾ ಗಿಡಗಳಿಂದ ಸೊಪ್ಪು , ಹೂ, ಗೊಂಡೆ, ಬೀಜ ಮಿಶ್ರಿತವಾಗಿರುವ ಅರ್ಧ ಕೆಜಿಯಷ್ಟು ಗಾಂಜಾ ಗಿಡವನ್ನು ಸ್ಯಾಂಪಲ್ ತೆಗೆದು ಸೀಲು ಮಾಡಿ P ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಮುದ್ದೇಮಾಲುಃ– 1 ಪೊಲೀಸರು ವಶಪಡಿಸಿಕೊಂಡ ಆ ಅರ್ಧ ಕೆಜಿ ಗಾಂಜಾ ಗಿಡದ ಸ್ಯಾಂಪಲ್ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೊಲೀಸರು ನಿಪಿ 8 ರಂತೆ ಮಹಜರ್ ಕ್ರಮ ಜರುಗಿಸಿ ನನಗೆ ಓದಿ ಹೇಳಿ ನಂತರ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ 9 ಎಂದು ಗುರುತಿಸಲಾಗಿದೆ. (ಸಾಕ್ಷಿಗೆ ಸಂಪೂರ್ಣ ಹೇಳಿಕೆ ಓದಿ ಹೇಳಲಾಗಿದೆ.) ಆರೋಪಿ ನನಗೆ ಗೊತ್ತು. ಆರೋಪಿ

ನನಗೆ ಗೊತ್ತಿರುವುದರಿಂದ ಈ ದಿನ ನಾನು ಅವರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – ಶ್ರೀ ಜಿ ಎಸ್ ಕೆ ವಕೀಲರಿಂದ – ಆರೋಪಿ ಪರವಾಗಿಃ–**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಬಿ. ಎಸ್. ಭಾರತಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಚಾಮರಾಜನಗರ.

## ಸ್ಪೆಷಲ್ ಕೇಸ್ – 40/2020

**ಚಾಸಾ–04**

**ಫ್ರಾಸಾ–03**

**ದಿನಾಂಕ 18.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಹೆಸರು** : ದೊರೆಸ್ವಾಮಿ

**ತಂದೆಯ ಹೆಸರು** : ಚಿನ್ನಪ್ಪ

**ವಯಸ್ಸು** : 64 ವರ್ಷ

**ವೃತ್ತಿ** : ವ್ಯವಸಾಯ

**ವಾಸ ಸ್ಥಳ** : ಟಿ ಜಿ ದೊಡ್ಡಿ

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತಿಲ್ಲ. ನಮ್ಮ ಜಮೀನು ಟಿ ಜಿ ದೊಡ್ಡಿಯಲ್ಲಿ ಬರುತ್ತದೆ. ಆರೋಪಿ ಜಮೀನು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ.

(ಈ ವೇಳೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೇಳಿದರು. ನಂತರ ಸಾಕ್ಷಿ ಕೊಟ್ಟ ಹೇಳಿಕೆಯನ್ನು ಪರಿಶೀಲಿಸಿ, ಸಾಕ್ಷಿಯು ಅದಕ್ಕೆ ಅನುಗುಣವಾಗಿ ಹೇಳದ ಕಾರಣ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟಿ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಈ ಆರೋಪಿ ತನಗೆ ಸೇರಿದ ಜಮೀನಿನಲ್ಲಿ ಅರಿಶಿಣ, ತೊಗರಿ ಬೆಳೆಯನ್ನು ಫಸಲನ್ನು ಹಾಕಿ ವ್ಯವಸಾಯ ಮಾಡಿದ್ದನು ಎಂದರೆ ಸರಿಯಲ್ಲ. ಪೊಲೀಸ್ ರು ದಿಃ 08.12.2017 ರಂದು ಈ ಆರೋಪಿ ವ್ಯವಸಾಯ ಮಾಡುವ ಜಮೀನಿಗೆ ಬಂದು ಆ ಜಮೀನಿನಲ್ಲಿ ಅಕ್ರಮವಾಗಿ ಈ ಆರೋಪಿ ಬೆಳೆದಿದ್ದ 106 ಕೆ ಜಿ ತೂಕದ 55 ಗಾಂಜಾ ಗಿಡಗಳನ್ನು ಅಮಾನತ್ತು ಪಡಿಸಿಕೊಂಡರು, ನಂತರ ಅವರ ಮೇಲೆ ಪ್ರಕರಣ ದಾಖಲು ಮಾಡಿದರು ಎಂಬ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಆರೋಪಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳಸಿದ್ದರರಿಂದ ಇದನ್ನು ಮರೆಮಾಚುವ ದೃಷ್ಟಿಯಿಂದ ನಮ್ಮಗಳನ್ನು ತಮ್ಮ ಜಮೀನಿನ ಕಡೆ ಬರದಂತೆ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಓದಿ ಹೇಳಿದಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲಗಳೆದ ಹೇಳಿಕೆಯನ್ನು ನಿಪಿ 10 ಎಂದು ಗುರುತಿಸಲಾಗಿದೆ. (ಸಂಪೂರ್ಣ ಹೇಳಿಕೆ ಓದಿ ಹೇಳಲಾಗಿದೆ.)

**ಪಾಟೀ ಸವಾಲು – ಶ್ರೀ ಜಿ ಎಸ್ ಕೆ ವಕೀಲರಿಂದ – ಆರೋಪಿ ಪರವಾಗಿಃ–**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಬಿ. ಎಸ್. ಭಾರತಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ.

## ಸ್ಪೆಷಲ್ ಕೇಸ್ – 40/2020

**ಚಾಸಾ–05**

**ಫ್ರಾಸಾ–04**

**ದಿನಾಂಕ 18.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಹೆಸರು** : ಷಣ್ಮುಗಂ

**ತಂದೆಯ ಹೆಸರು** : ಪೊನ್ನಪ್ಪನ್

**ವಯಸ್ಸು** : 46 ವರ್ಷ

**ವೃತ್ತಿ** : ವ್ಯವಸಾಯ

**ವಾಸ ಸ್ಥಳ** : ಟಿ ಜಿ ದೊಡ್ಡಿ

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ನ್ಯಾಯಾಲಯದಲ್ಲಿರುವ ಆರೋಪಿ ನನಗೆ ಗೊತ್ತಿಲ್ಲ. ನಮ್ಮ ಜಮೀನು ಟಿ ಜಿ ದೊಡ್ಡಿಯಲ್ಲಿ ಬರುತ್ತದೆ. ಆರೋಪಿ ಜಮೀನು ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ. ಈ ಕೇಸಿನ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲ.

(ಈ ವೇಳೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೇಳಿದರು. ನಂತರ ಸಾಕ್ಷಿ ಕೊಟ್ಟ ಹೇಳಿಕೆಯನ್ನು ಪರಿಶೀಲಿಸಿ, ಸಾಕ್ಷಿಯು ಅದಕ್ಕೆ ಅನುಗುಣವಾಗಿ ಹೇಳದ ಕಾರಣ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟಿ ಸವಾಲು – ಮಾನ್ಯ ಸರ್ಕಾರಿ ಅಭಿಯೋಜಕರಿಂದ :–**

ಈ ಆರೋಪಿ ತನಗೆ ಸೇರಿದ ಜಮೀನಿನಲ್ಲಿ ಅರಿಶಿಣ, ತೊಗರಿ ಬೆಳೆಯನ್ನು ಫಸಲನ್ನು ಹಾಕಿ ವ್ಯವಸಾಯ ಮಾಡಿದ್ದನು ಎಂದರೆ ಸರಿಯಲ್ಲ. ಪೊಲೀಸ್ ರು ದಿಃ 08.12.2017 ರಂದು ಈ ಆರೋಪಿ ವ್ಯವಸಾಯ ಮಾಡುವ ಜಮೀನಿಗೆ ಬಂದು ಆ ಜಮೀನಿನಲ್ಲಿ ಅಕ್ರಮವಾಗಿ ಈ ಆರೋಪಿ ಬೆಳೆದಿದ್ದ 106 ಕೆ ಜಿ ತೂಕದ 55 ಗಾಂಜಾ ಗಿಡಗಳನ್ನು ಅಮಾನತ್ತು ಪಡಿಸಿಕೊಂಡರು, ನಂತರ ಅವರ ಮೇಲೆ ಪ್ರಕರಣ ದಾಖಲು ಮಾಡಿದರು ಎಂಬ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ. ಈ ಆರೋಪಿ ಅಕ್ರಮವಾಗಿ ಗಾಂಜಾ ಗಿಡಗಳನ್ನು ಬೆಳೆಸಿದ್ದರರಿಂದ ಇದನ್ನು ಮರೆಮಾಚುವ ದೃಷ್ಟಿಯಿಂದ ನಮ್ಮಗಳನ್ನು ತಮ್ಮ ಜಮೀನಿನ ಕಡೆ ಬರದಂತೆ ನೋಡಿಕೊಳ್ಳುತ್ತಿದ್ದ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ಓದಿ ಹೇಳಿದಂತೆ ನಾನು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಅಲ್ಲಗಳೆದ ಹೇಳಿಕೆಯನ್ನು ನಿಪಿ 11 ಎಂದು ಗುರುತಿಸಲಾಗಿದೆ. (ಸಂಪೂರ್ಣ ಹೇಳಿಕೆ ಓದಿ ಹೇಳಲಾಗಿದೆ.)

**ಪಾಟೀ ಸವಾಲು – ಶ್ರೀ ಜಿ ಎಸ್ ಕೆ ವಕೀಲರಿಂದ – ಆರೋಪಿ ಪರವಾಗಿಃ–**

ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓದಿಹೇಳಲಾಗಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಬಿ. ಎಸ್. ಭಾರತಿ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಾಮರಾಜನಗರ.**